ಹರಪನಹಳ್ಳಿ ತಾಲ್ಲೂಕಿನಲ್ಲಿ ಅಗ್ನಿಶಾಮಕದಳ ಸ್ಥಾಪಿಸುವುದು.

೯೨. ಶ್ರೀ ಬಿ. ಹೆಚ್. ಯಂಕಾನಾಯ್ಕ (ಹರಪನಹಳ್ಳಿ).—ಮಾನ್ಯ ಒಳಾಡಳಿತ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಹರಪನಹಳ್ಳಿ ತಾಲ್ಲೂಕಿನಲ್ಲಿ ಅಗ್ನಿಶಾಮಕದಳ ಇಲ್ಲದೆ ಇರುವುದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದಲ್ಲಿ, ಈ ಅಗ್ನಿಶಾಮಕ ದಳದ ಕಚೇರಿಯಂನ್ನು ಸ್ಥಾಪಿಸಲು ಸರ್ಕಾರದವರು ಏನಾದರೂ ಕ್ರಮ ಕೈಗೊಂಡಿದ್ದಾರೆಯೇ?

ಶ್ರೀ ಬಿ. ರಾಚಯ್ಯ (ಮಾನ್ಯ ಗೃಹ ಮಂತ್ರಿಗಳು).—

ಅ) ಸರ್ಕಾರವು ಮೂರು ಹಂತಗಳಲ್ಲಿ ಅಗ್ನಿಶಾಮಕ ಠಾಣೆಗಳನ್ನು ತೆರೆಯಲು ತೀರ್ಮಾನ ಕೈಗೊಂಡಿದೆ. ಅಗ್ನಿಶಾಮಕ ಠಾಣೆಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ಮೊದಲು ತೆರೆಯಲಾಗುವುದು. ಎರಡನೇ ಹಂತದಲ್ಲಿ ಉಪ ವಿಭಾಗ ಕೇಂದ್ರ : ಮುಂದಿನ ತಾಲ್ಲೂಕು ಕೇಂದ್ರಗಳಲ್ಲಿ ತೆರೆಯಲಾಗುವುದು. ಮೂರನೆಯ ಹಂತದಲ್ಲಿ ಧಾರವಾಡ, ಬಿಜಾಪುರ, ಬೆಳಗಾಂ ಮತ್ತು ಕಾರವಾರ ಜಿಲ್ಲೆಗಳಲ್ಲಿ ಹಾಲಿ ಇರತಕ್ಕ ಸ್ಥಳೀಯ ಸಂಸ್ಥೆಗಳು ನಡೆಸುತ್ತಿರುವ ಅಗ್ನಿಶಾಮಕ ಠಾಣೆಗಳನ್ನು ಸರ್ಕಾರದ ವಶಕ್ಕೆ ತೆಗೆದು ಕೊಳ್ಳಲಾಗುವುದು. ಇದು ಸರ್ಕಾರವು ಅಗ್ನಿಶಾಮಕ ಠಾಣೆಗಳನ್ನು ಸ್ಥಾಪಿಸಲು ಅನುಸರಿಸುತ್ತಿರುವ ಸಾಮಾನ್ಯ ನೀತಿಯಾಗಿದೆ.

ಆ) ಬಳ್ಳಾರಿ ಜಿಲ್ಲೆಯಲ್ಲಿ ಈಗಾಗಲೇ ಬಳ್ಳಾರಿ ಹೊಸಪೇಟೆ ಮತ್ತು ಸಂಡೂರುಗಳಲ್ಲಿ ಅಗ್ನಿಶಾಮಕ ಠಾಣೆಗಳಿರುವುದರಿಂದ ಹರಪ್ಪನಹಳ್ಳಿಯಲ್ಲಿ ಅಗ್ನಿಶಾಮಕ ಠಾಣೆಯನ್ನು ತೆರೆಯಲಂ ಸದ್ಯಕ್ಕೆ ಸಾಧ್ಯವಾಗುವುದಿಲ್ಲ.

ಅಧ್ಯಕ್ಷರು.—ಈಗ ಲಿಖಿತ ಪ್ರಶ್ನೋತ್ತರಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯಂ ಮುಂದಿಡಲಾಗಿದೆ.

ಅಧ್ಯಕ್ಷರು.—ಲಿಖಿತ ಉತ್ತರಗಳನ್ನು ಸಭೆಯ ಮುಂದಿಡಲಾಯಿತು.

ಸರಕಾರದ ನೌಕರರಿಗೆ ತಂಟ್ಪೆಭತ್ಯೆಯನ್ನು ಹೆಚ್ಚಿಸುವುದು

೫೮೮. ಶ್ರೀ ಜಿ. ರಾಜುಗೌಡ(ಶಾನೂರು).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ?

ಅ) ಅಖಿಲ ಭಾರತ ಗ್ರಾಹಕರ ಬೆಲೆ ಸೂಚ್ಯಂಕದ ಪ್ರತಿ ಎಂಟು ಅಂಶಗಳು ಏರಿಕೆಯಾದ ಸಂದರ್ಭದಲ್ಲಿ ಕೇಂದ್ರ ಸರಕಾರದ ನೌಕರರು ಒಂದು ಕಂತಿನ ತಂಟ್ಪೆಭತ್ಯವನ್ನು ಪಡೆಯಲು ಅರ್ಹರಾಗಿರುತ್ತಾದ್ದರಿಂದ ಈ ಸೌಲಭ್ಯವನ್ನೇ ರಾಜ್ಯ ಸರಕಾರದ ನೌಕರರಿಗೂ ವಿಸ್ತರಿಸಲಾಗುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯರು).—

ಅ) ರಾಜ್ಯ ಸರ್ಕಾರದ ನೌಕರರಂ ಈ ಸೌಲಭ್ಯವನ್ನು ಈಗಾಗಲೇ ಪಡೆಯುತಿದ್ದಾರೆ.